# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದಲ್ಲಿ ಹೊಸದಾಗಿ **"ಪ್ರಜಾಸೇವಾ ಇಲಾಖೆ"** ಯನ್ನು ಸ್ಥಾಪಿಸುವ ಬಗ್ಗೆ.

**ಓದಲಾಗಿದೆ:**
1. ಸಿಆಸುಇ (ಇ-ಆಡಳಿತ/ದೂರುಗಳು ಮತ್ತು ಕುಂದು ಕೊರತೆಗಳು), ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 29 ಪಿಜಿಎ 2026, ದಿನಾಂಕ: 18-06-2026.
2. ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ), ಇವರ ಟಿಪ್ಪಣಿ ಸಂಖ್ಯೆ: ಆಇ 439 ವೆಚ್ಚ-12/2026. ದಿನಾಂಕ: 12-06-2026.
3. ಸಚಿವ ಸಂಪುಟ ಪ್ರಕರಣ ಸಂಖ್ಯೆ:ಸಿ.333/2026, ದಿನಾಂಕ: 20-06-2026.

*******

**ಪ್ರಸ್ತಾವನೆ:**

ರಾಜ್ಯ ಸರ್ಕಾರದಲ್ಲಿ ಆಡಳಿತಾತ್ಮಕ ದಕ್ಷತೆಯನ್ನು ಹೆಚ್ಚಿಸಲು ಮತ್ತು ಸಾರ್ವಜನಿಕರ ಅಹವಾಲುಗಳನ್ನು ಒಂದೇ ಸೂರಿನಡಿ ತ್ವರಿತವಾಗಿ ವಿಲೇವಾರಿ ಮಾಡಲು **"ಪ್ರಜಾಸೇವಾ ಇಲಾಖೆ"** ಎಂಬ ಹೊಸ ಇಲಾಖೆಯನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ಸೃಜಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

I. **ಸಂಯೋಜಿತ ವ್ಯವಸ್ಥೆ:** ಸಾರ್ವಜನಿಕ ಕುಂದುಕೊರತೆಗಳ ಸ್ವೀಕಾರ, ಮೇಲ್ವಿಚಾರಣೆ ಮತ್ತು ಆಡಳಿತಾತ್ಮಕ ಸುಧಾರಣಾ ಕ್ರಮಗಳನ್ನು ಒಂದು ಸಂಯೋಜಿತ (ಏಕೀಕೃತ) ಮಾದರಿಯಲ್ಲಿ ತರುವುದು.

II. **ಕಾಲಮಿತಿಯೊಳಗಿನ ಪರಿಹಾರ:** 'ಜನಸ್ಪಂದನ' ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವುದು ಮತ್ತು ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವ ಮೂಲಕ ನಾಗರಿಕರ ಸಮಸ್ಯೆಗಳನ್ನು ನಿಗದಿತ ಕಾಲಮಿತಿಯೊಳಗೆ ಪರಿಹರಿಸುವುದು.

III. **ಗುಣಮಟ್ಟದ ಮತ್ತು ನಾಗರಿಕರ ತೃಪ್ತಿದಾಯಕ ವಿಲೇವಾರಿ:** ಕುಂದುಕೊರತೆ ನಿವಾರಣೆಯ ಪರಿಣಾಮಕಾರಿತನವನ್ನು ನಾಗರಿಕರ ಪ್ರತಿಕ್ರಿಯೆ (ಫೀಡ್‌ಬ್ಯಾಕ್) ಮತ್ತು ತೃಪ್ತಿಯ ಮಾನದಂಡಗಳ ಮೂಲಕ ಮೌಲ್ಯಮಾಪನ ಮಾಡುವುದು.

IV. **ಸರ್ಕಾರಿ ಕಾರ್ಯವಿಧಾನಗಳ ಮರುವಿನ್ಯಾಸ (Government Business Process Reengineering):** ಆಡಳಿತದಲ್ಲಿ ಅನಗತ್ಯ ವಿಳಂಬವನ್ನು ತಪ್ಪಿಸಲು ಹಾಲಿ ಇರುವ ಕಾರ್ಯವಿಧಾನಗಳನ್ನು ಸರಳೀಕರಿಸುವುದು ಮತ್ತು ಸುಧಾರಣೆಗಳನ್ನು ತರುವುದು.

V. ಉತ್ತಮ ಪದ್ಧತಿಗಳ ಅನುಷ್ಠಾನ ಹಾಗೂ ನಿರಂತರ ಕಲಿಕೆ ಮತ್ತು ನಾವೀನ್ಯತೆ.

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸಿಆಸುಇ (ಇ-ಆಡಳಿತ)ದ ದಿನಾಂಕ:18-06-2026 ರ ಅನಧಿಕೃತ ಟಿಪ್ಪಣಿಯಲ್ಲಿ ಹೊಸದಾಗಿ ಸೃಜಿಸಲಾಗುವ ಇಲಾಖೆಗೆ ಸಿಆಸುಇ (ಇ-ಆಡಳಿತ) ಯಡಿಯಲ್ಲಿ ಬರುವ ದೂರುಗಳು ಮತ್ತು ಕುಂದುಕೊರತೆಗಳು ಎ ಮತ್ತು ಬಿ ಶಾಖೆ) ಯನ್ನು ವರ್ಗಾಯಿಸಲು ಸಹಮತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ:12-06-2026 ರ ಟಿಪ್ಪಣಿಯಲ್ಲಿ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸುವ ಇಲಾಖೆಯ ಸಂಬಂಧ ಆಡಳಿತ ಇಲಾಖೆಯು ಸಲ್ಲಿಸಿರುವ ಕರಡು ಸಚಿವ ಸಂಪುಟ ಟಿಪ್ಪಣಿಗೆ ಆರ್ಥಿಕ ಇಲಾಖೆಯು ಸಹಮತಿಸಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಸಚಿವ ಸಂಪುಟದ ದಿನಾಂಕ:20-06-2026 ರ ಪ್ರಕರಣದಲ್ಲಿ ನೂತನ **"ಪ್ರಜಾಸೇವಾ ಇಲಾಖೆ"ಯನ್ನು** ಸಕಾಲ ಮಿಷನ್ ನೊಂದಿಗೆ ಸ್ಥಾಪಿಸಲು ತೀರ್ಮಾನಿಸಲಾಗಿರುತ್ತದೆ.

ಈ ಉದ್ದೇಶಕ್ಕಾಗಿ, ಈ ಹೊಸ ಇಲಾಖೆಯನ್ನು ರಚಿಸಲು ಈ ಕೆಳಗಿನವುಗಳನ್ನು ವಿಲೀನಗೊಳಿಸಲಾಗಿದೆ.

1) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) – ಅನುಬಂಧ-1 ರಲ್ಲಿರುವ ಹುದ್ದೆಗಳೊಂದಿಗೆ

2) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ) ಅಡಿಯಲ್ಲಿನ ದೂರುಗಳು ಮತ್ತು ಕುಂದುಕೊರತೆಗಳು ವಿಭಾಗದ 'ಎ' ಮತ್ತು 'ಬಿ' ಶಾಖೆಗಳು – ಅನುಬಂಧ-2 ರಲ್ಲಿರುವ ಹುದ್ದೆಗಳೊಂದಿಗೆ

3) ಸಕಾಲ ಮಿಷನ್ - ಅನುಬಂಧ-3 ರಲ್ಲಿರುವ ಹುದ್ದೆಗಳೊಂದಿಗೆ

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 225 ಸಲುಸೇ 2026,**
**ಬೆಂಗಳೂರು, ದಿನಾಂಕ:24-06-2026.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಿಆಸುಇ (ಆಡಳಿತ ಸುಧಾರಣೆ) ಯಲ್ಲಿನ ಅಧಿಕಾರಿ/ಸಿಬ್ಬಂದಿಗಳ ಸಮೇತ ಎಲ್ಲಾ ಹುದ್ದೆಗಳನ್ನು ; ಸಿಆಸುಇ (ಇ-ಆಡಳಿತ) ಅಡಿಯಲ್ಲಿನ ದೂರುಗಳು ಮತ್ತು ಕುಂದುಕೊರತೆಗಳು ವಿಭಾಗದ 'ಎ' ಮತ್ತು 'ಬಿ' ಶಾಖೆಗಳು (ಅಧಿಕಾರಿ/ಸಿಬ್ಬಂದಿಗಳ ಸಮೇತ) ಮತ್ತು ಸಕಾಲ ಮಿಷನ್ ವಿಭಾಗದ ಎಲ್ಲಾ ಹುದ್ದೆಗಳನ್ನು ಸಂಯೋಜಿಸಿ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಹೊಸದಾಗಿ "ಪ್ರಜಾಸೇವಾ ಇಲಾಖೆ" ಯನ್ನು ಸ್ಥಾಪಿಸಿ ಆದೇಶಿಸಿದೆ.

ಹೊಸದಾಗಿ ರಚಿಸಲಾದ ಇಲಾಖೆಯ ರಚನೆ ಮತ್ತು ಹುದ್ದೆಗಳು ಈ ಕೆಳಗಿನಂತಿವೆ.

| ಕ್ರ.ಸಂ | ಹುದ್ದೆ | ಮಂಜೂರಾದ ಹುದ್ದೆ | | | ಪ್ರಜಾಸೇವಾ ಇಲಾಖೆಗೆ ಮರು ಹೊಂದಾಣಿಕೆ ಮೂಲಕ ಸೃಜಿಸಿದ ಹುದ್ದೆಗಳು |
|---|---|---|---|---|---|
| | | ಸಿ.ಆ.ಸು.ಇ (ಆ.ಸು) | ಸಿ.ಆ.ಸು.ಇ (ಇ-ಆಡಳಿತ) ದೂರುಗಳು ಮತ್ತು ಕುಂದುಕೊರತೆಗಳು ವಿಭಾಗದ 'ಎ' ಮತ್ತು 'ಬಿ' ಶಾಖೆಗಳಲ್ಲಿನ ಹುದ್ದೆಗಳು | ಸಕಾಲ ಮಿಷನ್ | |
| 1 | ಸರ್ಕಾರದ ಕಾರ್ಯದರ್ಶಿ ಮತ್ತು ಮಿಷನ್ ನಿರ್ದೇಶಕರು | 01 | - | - | 01 |
| 2 | ಅಪರ ಮಿಷನ್ ನಿರ್ದೇಶಕರು (ಅಪರ ಕಾರ್ಯದರ್ಶಿ/ ಜಂಟಿ ಕಾರ್ಯದರ್ಶಿ) | - | - | 02 | 02 |
| 3 | ಸರ್ಕಾರದ ಉಪ ಕಾರ್ಯದರ್ಶಿ | 01 | - | - | 01 |
| 4 | ಆಡಳಿತಾಧಿಕಾರಿ | | | 01 | 01 |

| ಕ್ರ.ಸಂ | ಹುದ್ದೆ | ಮಂಜೂರಾದ ಹುದ್ದೆ | | | ಪ್ರಜಾಸೇವಾ ಇಲಾಖೆಗೆ ಮರು ಹೊಂದಾಣಿಕೆ ಮೂಲಕ ಸೃಜಿಸಿದ ಹುದ್ದೆಗಳು |
|---|---|---|---|---|---|
| | | ಸಿ.ಆ.ಸು.ಇ (ಆ.ಸು) | ಸಿ.ಆ.ಸು.ಇ (ಇ-ಆಡಳಿತ) ದೂರುಗಳು ಮತ್ತು ಕುಂದುಕೊರತೆಗಳು ವಿಭಾಗದ 'ಎ' ಮತ್ತು 'ಬಿ' ಶಾಖೆಗಳಲ್ಲಿನ ಹುದ್ದೆಗಳು | ಸಕಾಲ ಮಿಷನ್ | |
| 5 | ಸಹಾಯಕ ಆಡಳಿತಾಧಿಕಾರಿ(ಗ್ರೇಡ್-1 ತಹಶೀಲ್ದಾರ್ ಶ್ರೇಣಿ) | - | - | 01 | 01 |
| 6 | ಸರ್ಕಾರದ ಅಧೀನ ಕಾರ್ಯದರ್ಶಿ | 03 | 01 | - | 04 |
| 7 | ಶಾಖಾಧಿಕಾರಿ | 05 | 02 | - | 07 |
| 8 | ಲೆಕ್ಕಾಧೀಕ್ಷಕರು | - | - | 01 | 01 |
| 9 | ಹಿರಿಯ ಸಹಾಯಕರು | 09 | 02 | - | 11 |
| 10 | ಸಹಾಯಕರು | 07 | 05 | - | 12 |
| 11 | ಕಿರಿಯ ಸಹಾಯಕರು | 07 | 02 | - | 09 |
| 12 | ಶೀಘ್ರಲಿಪಿಗಾರರು | 05 | - | - | 05 |
| 13 | ಬೆರಳಚ್ಚುಗಾರರು/ ದತ್ತಾಂಶ ನಮೂದು ಸಹಾಯಕರು | 05 | - | - | 05 |
| 14 | ವಾಹನ ಚಾಲಕರು | 04 | - | - | 04 |
| 15 | ಗ್ರೂಪ್ ಡಿ | 09 | - | - | 09 |
| **Total** | | **56** | **12** | **05** | **73** |

| ಕ್ರ.ಸಂ. | ಗುತ್ತಿಗೆ /ಹೊರಗುತ್ತಿಗೆ ಹುದ್ದೆಗಳು | ಸಂಖ್ಯೆ |
|---|---|---|
| 1. | ರಾಜ್ಯ ನಿರ್ವಹಣಾ ಸಮಾಲೋಚಕರು | 1 |
| 2. | ರಾಜ್ಯ ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 1 |
| 3. | ಹೆಚ್ಚುವರಿ ರಾಜ್ಯ ನಿರ್ವಹಣಾ ಸಮಾಲೋಚಕರು | 1 |
| 4. | ಹೆಚ್ಚುವರಿ ರಾಜ್ಯ ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 1 |
| 5. | ಸಹಾಯಕ ನಿರ್ವಹಣಾ ಸಮಾಲೋಚಕರು | 1 |
| 6. | ಸಹಾಯಕ ಮಾಹಿತಿ ತಂತ್ರಜ್ಞಾನ ಸಮಾಲೋಚಕರು | 1 |
| 7. | ಡಾಟಾ ಎಂಟ್ರಿ ಆಪರೇಟರ್‌ಗಳು (ಒಂದು ಅಪರ ಮಿಷನ್ ನಿರ್ದೇಶಕರು-1 ರವರ ಆಪ್ತ ಸಹಾಯಕ ಹುದ್ದೆ ಸೇರಿ) | 5 |
| 8. | ಜಿಲ್ಲಾ ಮಾಹಿತಿ ತಂತ್ರಜ್ಞಾನ ಸಮಾಲೋಚಕರು, ಸಕಾಲ ಮಿಷನ್ (ಜಿಲ್ಲೆಗಳು + ಬಿ.ಬಿ.ಎಂ.ಪಿ = 32 (31+1) | 32 |
| 9. | ವಾಹನ ಚಾಲಕರು | 2 |
| 10. | 'ಡಿ' ಗ್ರೂಪ್ ನೌಕರರು | 3 |
| | **ಒಟ್ಟು** | **48** |

ಕರ್ನಾಟಕ ಸರ್ಕಾರ (ವ್ಯವಹಾರ ಹಂಚಿಕೆಗಳು) ನಿಯಮಗಳು 1977ರ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡುವ ಬಗ್ಗೆ ಸಿಆಸುಇ (ಸೇವಾ ನಿಯಮ) ವಿಭಾಗವು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಸಿಆಸುಇ (ಇ-ಆಡಳಿತ) ಯ ದಿನಾಂಕ: 18-06-2026 ರಲ್ಲಿನ ಸಹಮತಿಯನ್ವಯ ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 439 ವೆಚ್ಚ-12/2026, ದಿನಾಂಕ:12-06-2026 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

24/06/2026
**(ಗಾಯತ್ರಿ ಜಿ.ಎನ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
24/06/2026 (ಸೇವೆಗಳು-6)

**ಪ್ರತಿಗಳು:-**

1. ಪ್ರಧಾನ ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು , ಬೆಂಗಳೂರು.
5. ಸರ್ಕಾರದ ಎಲ್ಲಾ ಅಪರ/ಜಂಟಿ/ಉಪ ಕಾರ್ಯದರ್ಶಿಗಳು, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ಲೆಕ್ಕಪತ್ರ)/ (ಐಆರ್‌ಎಲ್‌ಎ) / (ಇ-ಆಡಳಿತ)/ (ಸಿಬ್ಬಂದಿ) / (ಆಡಳಿತ) / (ಕಾರ್ಯಕಾರಿ) / (ವಿದೇಶ ಕೋಶ) / (ರಾಜ್ಯ ಶಿಷ್ಟಾಚಾರ)/ (ಸೇವೆಗಳು-1,2,3,4,5,7)/(ಸೇವಾ ನಿಯಮಗಳು-ಡಿ ಶಾಖೆ)/(ಆಡಳಿತ ಸುಧಾರಣೆ), ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.